

ನೆಕ್ಲೇಸ್ ಮೇಲೆ ವಜ್ರದ ಹರಳುಗಳನ್ನು ಕೂರಿಸುವುದು..

ಬ್ರಿಟನ್ ರಾಜಕುಮಾರಿ ಎರಡನೆ ಎಲಿಜಬೆತ್ ತನ್ನ ಮದುವೆಯ ನಿಶ್ಚಿತಾರ್ಥಕ್ಕೆ ಪ್ರಿನ್ಸ್ ಫಿಲಿಪ್ ನಿಂದ 'ಸ್ಕ್ವೇರ್‌ಕಟ್ ಡೈಮಂಡ್' ಉಂಗುರವನ್ನು ಹಾಕಿಸಿಕೊಂಡದ್ದಷ್ಟೇ ಅಲ್ಲದೆ ವಜ್ರದ ಬ್ರೇಸ್‌ಲೆಟ್ ಅನ್ನು ಮದುವೆಯ ಉಡುಗೊರೆಯಾಗಿ ಪಡೆದಳು. ನೂರಾರು ವರ್ಷ ಹಿಂದೆಯೇ ಈ ಬ್ರೇಸ್‌ಲೆಟ್ ಭಾರತೀಯ ಕರೆನ್ಸಿಯ ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳುತ್ತಿತ್ತು.

★ ಕೊಹಿನೂರು ವಜ್ರ ಜಗದ್ವಿಖ್ಯಾತಿ. ಅತ್ಯಂತ ದುಬಾರಿಯಾದ ಕೊಹಿನೂರು ವಜ್ರ ಖಚಿತ ಕಿರೀಟ ಇಂಗ್ಲೆಂಡಿನ ಮಹಾರಾಣಿಯ ರಾಯಲ್ ದರ್ಬಾರಿನಲ್ಲಿ ಫಳ ಫಳ ಹೊಳೆಯುತ್ತಿದೆ.

★ ಪ್ರಿನ್ಸೆಸ್ ಡಯಾನ ರಾಜಕುಮಾರ ವೇಲ್ಸ್‌ನ ಬಳಿಯಿಂದ 14 ಸುತ್ತಿನ ವಜ್ರದ ಉಂಗುರವನ್ನು ಉಡುಗೊರೆಯಾಗಿ ಸ್ವೀಕರಿಸಿದಳು.

– ಇವೆಲ್ಲ ರಾಜ ದರ್ಬಾರಿನ ಮಾತಾಯಿತು. ಅಂದು ರಾಜ ಮನೆತನ ಹಾಗೂ ಅತ್ಯಂತ ಶ್ರೀಮಂತ ವರ್ಗದವರಿಗೆ ಮಾತ್ರವೇ ಸೀಮಿತವಾಗಿದ್ದ ದುಬಾರಿ ವಜ್ರ, ಇಂದು ಮಧ್ಯಮ ವರ್ಗದ ಮಹಿಳೆಯರಿಗೂ ಕೈಗೆಟಕುತ್ತಿದೆ. ವಜ್ರದ ಆಭರಣ ಇಂದು ಬರೀ ಪ್ರತಿಷ್ಠೆಯ ಪ್ರಶ್ನೆಯಾಗಿ ಉಳಿದಿಲ್ಲ. ಅದೊಂದು ಫ್ಯಾಷನ್ ಟ್ರೆಂಡ್ ಆಗಿ ಬದಲಾಗಿದೆ. ಸಣ್ಣ ಒಡವೆಯಾದರೂ ಸರಿ, ವಜ್ರದ್ದೇ ಆಗಬೇಕು ಎಂಬ ಮಹದಾಸೆ ಮಧ್ಯಮವರ್ಗದ ಮಹಿಳೆಯದ್ದು ಆಗಿದೆ. ಗುಣದಲ್ಲಿ ಕಠಿಣವಾದರೂ ಬದಲಾವಣೆಗಳಿಗೆ ಒಡ್ಡಿಕೊಳ್ಳುತ್ತಾ, ಗ್ರಾಹಕರ ಹೊಸ ಕಲ್ಪನೆಗಳಿಗೆ ಸ್ಪಂದಿಸುತ್ತಿದೆ, ಹಣದ ವಿಷಯದಲ್ಲಿ, ದುಬಾರಿತನ ಬಿಟ್ಟು, ತುಸು ಮೃದು ಧೋರಣೆ ತಾಳುತ್ತಿದೆ ಕಣ್ಣು ಕೋರೈಸುವ ವಜ್ರದ ಹರಳು.

ಇದು ವಜ್ರದ ಗುಣ..! ಗಟ್ಟಿತನಕ್ಕೆ ಇರುವ ಉಪಮೆ ಎಂದರೆ ಅದು ವಜ್ರ. ಹೀಗಾಗಿಯೇ 'ವಜ್ರದಷ್ಟೇ ಕಠಿಣ' ಎಂಬ ಆಡುಮಾತು ಪ್ರಚಲಿತದಲ್ಲಿದೆ. ವಜ್ರಕ್ಕೆ ಎಂಥವರ ಮನಸ್ಸನ್ನೂ ಕರಗಿಸುವ ಮಾಂತ್ರಿಕ ಶಕ್ತಿ ಇದೆ. ಆಭರಣಗಳ ಮಟ್ಟಿಗೆ ವಜ್ರ 'ಮಹಾರಾಜ'ನಂತೆ ಮೆರೆಯುತ್ತಿದೆ. ಹೀಗಾಗಿ ಅನಾದಿ ಕಾಲದಿಂದಲೂ ವಜ್ರಕ್ಕೆ ಮಹತ್ವದ ಸ್ಥಾನ. ವಜ್ರದ ಒಡವೆಗಳಿಗೆ ವಿಶೇಷ 'ಚುಂಬಕ ಶಕ್ತಿ' ಇದೆ. ಮನಮೋಹಕ ವಿನ್ಯಾಸ, ಬಿಡಿಸಲಾರದಂಥ ಬಾಂಧವ್ಯ, ಚೆಲುವಿನ ನೋಟ, ಅಂದದ ಹೊಳಪು ವಜ್ರದಾಭರಣದಲ್ಲಿವೆ. ಇದೇ ಕಾರಣಕ್ಕೆ ವಜ್ರದಾಭರಣ ಫ್ಯಾಷನ್ ಟ್ರೆಂಡ್ ಆಗಿದ್ದಲ್ಲದೆ ಮದುವೆ ಸಮಾರಂಭಕ್ಕೆ ವಜ್ರದ ಒಂದಾದರೂ ಆಭರಣ ಇರಲೇ ಬೇಕು ಎಂಬ 'ಅಲಿಖಿತ ನಿಯಮ'ವನ್ನು ಈಗ ಮಹಿಳೆಯರು ಪಾಲಿಸುತ್ತಿದ್ದಾರೆ.

ಜಾಗತಿಕವಾಗಿ ನೋಡಿದರೆ, ವಜ್ರದ ನಿಕ್ಷೇಪಗಳು ರಷ್ಯಾ ಮತ್ತು ಆಫ್ರಿಕಾಗಳಲ್ಲಿ ಯಥೇಚ್ಛವಾಗಿವೆ. ಇಲ್ಲಿಂದ ಕಚ್ಚಾ ವಜ್ರ ಭಾರತ ಸೇರಿದಂತೆ ಉಳಿದೆಲ್ಲ ರಾಷ್ಟ್ರಗಳಿಗೆ ಸರಬರಾಜು ಆಗುತ್ತಿದೆ. ಬೆಲ್ಜಿಯಂನಲ್ಲಿ ವಜ್ರದ ಹರಳುಗಳನ್ನು ಸಂಸ್ಕರಿಸುವ ವಿಶೇಷ ಘಟಕಗಳಿವೆ. ಅಲ್ಲಿಂದಲೂ ವಜ್ರದ ಹರಳುಗಳು ವಿಶ್ವದ ಎಲ್ಲೆಡೆಗೆ ಲಭ್ಯವಾಗುತ್ತಿದೆ.